ದೂರವಾಣಿ : 080-27835122
ಫ್ಯಾಕ್ಸ್ : 080-27836569

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

ವಸತಿ ಉದ್ದೇಶಕ್ಕಾಗಿ
ಕರಡು ಅನುಮೋದನಾ ಪತ್ರ
(ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

ಸಂಖ್ಯೆ: ಆಯೋಪ್ರಾ:ಎಲ್ಎಓ:31:2015-16 ದಿನಾಂಕ: 19 MAY 2017

ವಿಷಯ: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.60/2ರಲ್ಲಿನ 03ಎಕರೆ 32ಗುಂಟೆ ವಿಸ್ತೀರ್ಣದ ಜಮೀನಿಗೆ **ಕರಡು ವಸತಿ ವಿನ್ಯಾಸ** ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಮೆ.ಅರಟುಕುಲಮ್ ಡೆವಲಪರ್ಸ್, ಸಂಸ್ಥೆಯ ಪಾಲುದಾರರಾದ ಶ್ರೀ ಟೋನಿವಿನ್ಸೆಂಟ್, ಇವರ ಮನವಿ ದಿನಾಂಕ: 11.01.2017.
2. ದಿನಾಂಕ:18.01.2017ರಂದು ನಡೆದ ಪ್ರಾಧಿಕಾರದ 59ನೇ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:12ರ ನಿರ್ಣಯ.
3. ಪ್ರಾಧಿಕಾರಕ್ಕೆ ಪಾವತಿಸಿದ ಹಣ ರೂ. 3,12,000/- ಡಿ.ಡಿ.ಸಂಖ್ಯೆ:999142 ಮತ್ತು ಕೆರೆ ಸಂರಕ್ಷಣಾ ಶುಲ್ಕ ರೂ.3,80,000/-ಡಿ.ಡಿ.ಸಂಖ್ಯೆ:999143 ದಿನಾಂಕ:24.08.2015 ಮತ್ತು ರೂ.6,000/- ರಶೀದಿ ಸಂಖ್ಯೆ:1133640 ಕೆರೆ ಸಂರಕ್ಷಣಾ ಶುಲ್ಕ ರೂ. 5,000/-ರಶೀದಿ ಸಂಖ್ಯೆ:1133159 ದಿನಾಂಕ:04.04.2017.
4. ಆನೇಕಲ್ ಉಪನೋಂದಣಾಧಿಕಾರಿಗಳ ಪತ್ರ ಸಂಖ್ಯೆ:ANK-1-00897-2017-18 ನೋಂದಾಯಿತ ಪರಿತ್ಯಜನಾ ಪತ್ರದ ನೋಂದಣಿ ದಿನಾಂಕ:12.05.2017.
5. ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯ್ತಿ ಕಾರ್ಯಾಲಯ ರವರ ಪತ್ರ ಸಂಖ್ಯೆ:14/17-18 ದಿನಾಂಕ: 15.05.2017

****

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.60/2ರಲ್ಲಿನ 03ಎಕರೆ 32ಗುಂಟೆ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸಲು ಕೋರಿರುತ್ತಾರೆ. ಉಲ್ಲೇಖ(2)ರಂತೆ, ನಡೆದ ಪ್ರಾಧಿಕಾರದ ಸಭೆಯಲ್ಲಿ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿದೆ. ಹಾಗೂ ಉಲ್ಲೇಖ(3)ರಂತೆ, ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ(4)ರಂತೆ, ಸಾರ್ವಜನಿಕ ನಿವೇಶನವನ್ನು ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಾಗೂ ಉಲ್ಲೇಖ(5)ರಂತೆ, ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ ಕಾರ್ಯಾಲಯಕ್ಕೆ ಹಸ್ತಾಂತರಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ17(2)ರನ್ವಯ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಕರಡು ವಸತಿ ಬಡಾವಣೆಯಲ್ಲಿ ಬರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ ನಂತರ ಸಂಬಂಧಿಸಿದ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದಲ್ಲಿ ವಸತಿ ವಿನ್ಯಾಸ ನಕ್ಷೆಗೆ ವಲಯನಿಯಮಾವಳಿಯಂತೆ, ಅನುಮೋದನೆ ನೀಡಿ ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲಾಗುವುದು.

ಕ್ರ.ಸಂ.

ಷರತ್ತುಗಳು

1. ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷದೊಳಗೆ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ತಾತ್ಕಾಲಿಕ ಅನುಮೋದನೆಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅಂತಿಮ ಹಂತದ ಅಂದರೆ ಶೇಕಡ 100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಪೂರ್ವದಲ್ಲಿ ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ನೀರಿನ ಸಂಪರ್ಕ ಹಾಗೂ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆಯಿಂದ ಮತ್ತು ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
3. ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಪ್ರದೇಶಕ್ಕೆ Fencing ಅಳವಡಿಸಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ತೋಟಗಾರಿಕೆ ಇಲಾಖೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
4. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯ ಒಳಚರಂಡಿ ವ್ಯವಸ್ಥೆ ಹಾಗೂ ಶುದ್ಧೀಕರಣ ಘಟಕ (STP)ವನ್ನು ವಿನ್ಯಾಸದಲ್ಲಿ ನಿರ್ಮಾಣ ಮಾಡತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು.
7. ಕರಡು ಅನುಮೋದಿತ ವಿನ್ಯಾಸದ ಸೂಕ್ತಸ್ಥಳಗಳಲ್ಲಿ Storm Water Pits (SEP) ಮತ್ತು (RP)ಗಳನ್ನು ನಿರ್ಮಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ (Rain water Harvesting pit)ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ಕರಡು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನವನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
9. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
10. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
11. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

12. ಕರಡು ವಸತಿ ಬಡಾವಣೆಯಲ್ಲಿ ವಿಕಲಚೇತನರಿಗೆ ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು ಹಾಗೂ ರಸ್ತೆಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

13. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲೀನ ನೀರನ್ನು ಬಿಡಬಾರದು.

14. ಈ ಅನುಮೋದಿತ ಕರಡು ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು, ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.

15. **ಸದರಿ ಕರಡು ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.**

16. ಕರಡು ಅನುಮೋದಿತ ವಿನ್ಯಾಸದಲ್ಲಿ ಬರುವ 18.00ಮೀಟರ್‌ಗಿಂತ ಹೆಚ್ಚಿನ ಅಗಲದ ರಸ್ತೆಗಳ ಅಕ್ಕ-ಪಕ್ಕದಲ್ಲಿ ಪಾದಚಾರಿ ಮತ್ತು ಸೈಕಲ್ ಟ್ರಾಕ್‌ನ್ನು ಅಳವಡಿಸಿಕೊಳ್ಳತಕ್ಕದ್ದು.

17. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

18. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 17(4)ರಂತೆ ಕ್ರಮ ಜರುಗಿಸಲಾಗುವುದು.

19. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.

20. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ಅಂಚಿನಲ್ಲಿ ಬಡಾವಣೆಗಳ ಉದ್ದಕ್ಕೂ ಡಾಂಬರು ರಸ್ತೆಯ ಮೇಲ್ಮೈನಿಂದ 2 ½ ಅಡಿ ಆಳಕ್ಕೆ ಚರಂಡಿಯ ಮೇಲ್ಮೈ ರಸ್ತೆಯ ಮಟ್ಟದಿಂದ ¾ ಅಡಿ ಕೆಳಕ್ಕೆ ರಸ್ತೆ ಮತ್ತು ಬಡಾವಣೆಯ ನೀರು ಚರಂಡಿಗೆ ಹೋಗುವಂತೆ ಕಾಂಕ್ರೀಟ್ ಚರಂಡಿ ನಿರ್ಮಿಸುವಂತೆ ಮತ್ತು ಬಡಾವಣೆಯ ಮುಖ್ಯದ್ವಾರಗಳಲ್ಲಿ ಸಹ ನೀರು ರಸ್ತೆಗೆ ಹರಿದು ಬರದಂತೆ ಚರಂಡಿ ನಿರ್ಮಿಸಿ ಅದರ ಮೇಲೆ ಸೂಕ್ತ ವ್ಯವಸ್ಥೆ (COW CATCHERS) ಗಳನ್ನು ಅಳವಡಿಸುವಂತೆ, ಮತ್ತು ಬಡಾವಣೆಯ ದ್ವಾರದಿಂದ ರಸ್ತೆಯ ಅಂಚಿನವರೆಗೆ ರಸ್ತೆಯನ್ನು ಎತ್ತರಿಸದಂತೆ ಸೂಚಿಸಲಾಗಿದೆ.

21. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

22. ಕರಡು ಅನುಮೋದಿತ ವಿನ್ಯಾಸ ನಕ್ಷೆಯನ್ನು ಸಾರ್ವಜನಿಕರ ವೀಕ್ಷಣೆಗಾಗಿ ಸ್ಥಳದಲ್ಲಿ ನಾಮಫಲಕದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

19/05/17

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಪ್ರತಿಯನ್ನು:

1. ಮೆ.ಅರಟುಕುಲಮ್ ಡೆವಲಪರ್ಸ್, ಸಂಸ್ಥೆಯ ಪಾಲುದಾರರಾದ ಶ್ರೀ ಟೋನಿವಿನ್ಸೆಂಟ್, ನಂ.739, ಹೊಸೂರು ಮೈನ್ ರೋಡ್, ಸಿಂಗಸಂದ್ರ, ಬೆಂಗಳೂರು-560 068 ಇವರಿಗೆ ಮಾಹಿತಿಗಾಗಿ ಕರಡು ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸಲಾಗಿದೆ.
2. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಕರಡು ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ದೂರವಾಣಿ : 080-27835122
ಫ್ಯಾಕ್ಸ್ : 080-27836569

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL : www.anekal-pa.in

ವಸತಿ ಉದ್ದೇಶಕ್ಕಾಗಿ

ಕರಡು ಅನುಮೋದನಾ ಪತ್ರ

(ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

ಸಂಖ್ಯೆ: ಆಯೋಪ್ರಾ:ಎಲ್‌ಎಓ:10,11(ಒಗ್ಗೂಡಿಸಿ):15-16 ದಿನಾಂಕ: 03 FEB 2017

ವಿಷಯ:ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.19ರಲ್ಲಿನ 02ಎಕರೆ 04ಗುಂಟೆ ಮತ್ತು 19ರಲ್ಲಿನ 02ಎಕರೆ 03ಗುಂಟೆ ಒಟ್ಟು 04ಎಕರೆ 07ಗುಂಟೆ ಅನುಮೋದಿತ ವಿನ್ಯಾಸಕ್ಕೆ ಹೊಂದಿಕೊಂಡಂತಿರುವ ಸ.ನಂ.19ರಲ್ಲಿನ 0-31ಗುಂಟೆ ಸೇರಿ ಒಟ್ಟು 04ಎಕರೆ 38ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಮಾರ್ಪಡಿತ ಕರಡು ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:1. ಮೆ.ಅರಟುಕುಲಮ್ ಡೆವಲಪರ್ಸ್ ಮತ್ತು ಶ್ರೀವಿಶಾಲ್ ವಿನ್‌ಸೆಂಟ್ ಟೋನಿ ಇವರ ಮನವಿ ದಿನಾಂಕ:19.08.2016.
2. ದಿನಾಂಕ:19.09.2016ರಂದು ನಡೆದ ಪ್ರಾಧಿಕಾರದ 58ನೇ ಸಭೆಯ ವಿಷಯ ಸಂಖ್ಯೆ:17ರ ನಿರ್ಣಯ.
3. ಪ್ರಾಧಿಕಾರಕ್ಕೆ ಪಾವತಿಸಿದ ಹಣ ರೂ. 71,000/- ರಶೀದಿ ಸಂಖ್ಯೆ:1133344 ಕೆರೆ ಸಂರಕ್ಷಣಾ ಶುಲ್ಕ ರೂ. 77,500/-ರಶೀದಿ ಸಂಖ್ಯೆ:1133122 ದಿನಾಂಕ:13.10.2016 ಹಾಗೂ ರೂ.1,73,000/-,ರೂ.1,72,000/- ರಶೀದಿ ಸಂಖ್ಯೆ:954999 ಮತ್ತು ಕೆರೆ ಸಂರಕ್ಷಣಾ ಶುಲ್ಕ ರೂ.2,10,000/- ರೂ.2,07,500/-ರಶೀದಿ ಸಂಖ್ಯೆ:954563 ದಿನಾಂಕ:25.08.2015.
4. ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯ್ತಿ ಕಾರ್ಯಾಲಯ ರವರ ಪತ್ರ ದಿನಾಂಕ:19.12.2016 ಮತ್ತು ತಿದ್ದುಪಡಿ ದಿನಾಂಕ:02.02.2017.
5. ಆನೇಕಲ್ ಉಪನೊಂದಣಾಧಿಕಾರಿಗಳ ಪತ್ರ ಸಂಖ್ಯೆ:ANK-1-05705-2016-17 ನೊಂದಾಯಿತ ಪರಿತ್ಯಜನಾ ಪತ್ರದ ನೊಂದಣಿ ದಿನಾಂಕ:17.12.2016.

****

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.19ರಲ್ಲಿನ 02ಎಕರೆ 04ಗುಂಟೆ ಮತ್ತು 19ರಲ್ಲಿನ 02ಎಕರೆ 03ಗುಂಟೆ ಒಟ್ಟು 04ಎಕರೆ 07ಗುಂಟೆ ಅನುಮೋದಿತ ವಿನ್ಯಾಸಕ್ಕೆ ಹೊಂದಿಕೊಂಡಂತಿರುವ ಸ.ನಂ.19ರಲ್ಲಿನ 0-31ಗುಂಟೆ ಸೇರಿ ಒಟ್ಟು 04ಎಕರೆ 38ಗುಂಟೆ ಪ್ರದೇಶಕ್ಕೆ ಮಾರ್ಪಡಿತ ವಸತಿ ವಿನ್ಯಾಸವನ್ನು ಅನುಮೋದಿಸಲು ಕೋರಿರುತ್ತಾರೆ. ಉಲ್ಲೇಖ(2)ರಂತೆ, ನಡೆದ ಪ್ರಾಧಿಕಾರದ ಸಭೆಯಲ್ಲಿ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿದೆ. ಹಾಗೂ ಉಲ್ಲೇಖ(3)ರಂತೆ, ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ(4)ರಂತೆ, ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ ಕಾರ್ಯಾಲಯಕ್ಕೆ ಉಲ್ಲೇಖ(5)ರಂತೆ, ಸಾರ್ವಜನಿಕ ನಿವೇಶನವನ್ನು ಪ್ರಾಧಿಕಾರಕ್ಕೆ ನೊಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ17(2)ರನ್ವಯ ಕರಡು ವಸತಿ ವಿನ್ಯಾಸವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕ ಅನುಮೋದನೆ

Scanned by CamScanner

ನೀಡಲಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡಿದಲ್ಲಿ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗುವುದು.

ಕ್ರ.ಸಂ.	ಷರತ್ತುಗಳು
1.	ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷದೊಳಗೆ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ತಾತ್ಕಾಲಿಕ ಅನುಮೋದನೆಯನ್ನು ನವೀಕರಿಸಿಕೊಳ್ಳತಕ್ಕದ್ದು.
2.	ಈ ಪ್ರಾಧಿಕಾರದಿಂದ ನೀಡಿರುವ Demarcation ನಕ್ಷೆಯಂತೆ ಜಮೀನಿನ ಮೇಲೆ ಅಳವಡಿಸಿರುವ ಅಳತೆಗೆ ಅನುಗುಣವಾಗಿ ಕರಡು ವಿನ್ಯಾಸ ನಕ್ಷೆಯನ್ನು (ಅಭಿವೃದ್ಧಿಪಡಿಸುವುದಕ್ಕೆ ಮಾತ್ರ)ಅನುಮೋದಿಸಲಾಗಿದೆ.
3.	ಅಂತಿಮ ಹಂತದ ಅಂದರೆ ಶೇಕಡ 100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಪೂರ್ವದಲ್ಲಿ ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ನೀರಿನ ಸಂಪರ್ಕ ಹಾಗೂ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆಯಿಂದ ಮತ್ತು ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
4.	ಕರಡು ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಪ್ರದೇಶಕ್ಕೆ Fencing ಅಳವಡಿಸಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ತೋಟಗಾರಿಕೆ ಇಲಾಖೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
5.	ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯ ಒಳಚರಂಡಿ ವ್ಯವಸ್ಥೆ ಹಾಗೂ ಶುದ್ಧೀಕರಣ ಘಟಕ (STP)ವನ್ನು ವಿನ್ಯಾಸದಲ್ಲಿ ನಿರ್ಮಾಣ ಮಾಡತಕ್ಕದ್ದು.
6.	ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
7.	ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು.
8.	ಕರಡು ಅನುಮೋದಿತ ವಿನ್ಯಾಸದ ಸೂಕ್ತಸ್ಥಳಗಳಲ್ಲಿ Storm Water Pits (SEP) ಮತ್ತು (RP)ಗಳನ್ನು ನಿರ್ಮಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ (Rain water Harvesting pit)ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
9.	ಕರಡು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನವನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
10.	ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
11.	ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
12.	ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

Scanned by CamScanner

13. ಪ್ರಸ್ತಾವಿತ ಬಡಾವಣೆಯಲ್ಲಿ ವಿಕಲಚೇತನರಿಗೆ ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು ಹಾಗೂ ರಸ್ತೆಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

14. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲೀನ ನೀರನ್ನು ಬಿಡಬಾರದು.

15. ಈ ಅನುಮೋದಿತ ಕರಡು ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು. ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.

16. **ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.**

17. ಕರಡು ಅನುಮೋದಿತ ವಿನ್ಯಾಸದಲ್ಲಿ ಬರುವ 18.00ಮೀಟರ್ ಗಿಂತ ಹೆಚ್ಚಿನ ಅಗಲದ ರಸ್ತೆಗಳ ಅಕ್ಕ-ಪಕ್ಕದಲ್ಲಿ ಪಾದಚಾರಿ ಮತ್ತು ಸೈಕಲ್ ಟ್ರಾಕ್‌ನ್ನು ಅಳವಡಿಸಿಕೊಳ್ಳತಕ್ಕದ್ದು.

18. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

19. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 17(4)ರಂತೆ ಕ್ರಮ ಜರುಗಿಸಲಾ-ಗುವುದು.

20. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.

21. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ಅಂಚಿನಲ್ಲಿ ಬಡಾವಣೆಗಳ ಉದ್ದಕ್ಕೂ ಡಾಂಬರು ರಸ್ತೆಯ ಮೇಲ್ಮೈನಿಂದ 2 ½ ಅಡಿ ಆಳಕ್ಕೆ ಚರಂಡಿಯ ಮೇಲ್ಮೈ ರಸ್ತೆಯ ಮಟ್ಟದಿಂದ ¾ ಅಡಿ ಕೆಳಕ್ಕೆ ರಸ್ತೆ ಮತ್ತು ಬಡಾವಣೆಯ ನೀರು ಚರಂಡಿಗೆ ಹೋಗುವಂತೆ ಕಾಂಕ್ರೀಟ್ ಚರಂಡಿ ನಿರ್ಮಿಸುವಂತೆ ಮತ್ತು ಬಡಾವಣೆಯ ಮುಖ್ಯದ್ವಾರಗಳಲ್ಲಿ ಸಹ ನೀರು ರಸ್ತೆಗೆ ಹರಿದು ಬರದಂತೆ ಚರಂಡಿ ನಿರ್ಮಿಸಿ ಅದರ ಮೇಲೆ ಸೂಕ್ತ ವ್ಯವಸ್ಥೆ (COW CATCHERS) ಗಳನ್ನು ಅಳವಡಿಸುವಂತೆ, ಮತ್ತು ಬಡಾವಣೆಯ ದ್ವಾರದಿಂದ ರಸ್ತೆಯ ಅಂಚಿನವರೆಗೆ ರಸ್ತೆಯನ್ನು ಎತ್ತರಿಸದಂತೆ ಸೂಚಿಸಲಾಗಿದೆ.

Scanned by CamScanner

22. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿ -ರುವುದಿಲ್ಲ.

03/02/17

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಪ್ರತಿಯನ್ನು:

1. ಮೆ.ಅರಟುಕುಲಮ್ ಡೆವಲಪರ್ಸ್ ಮತ್ತು ಶ್ರೀವಿಶಾಲ್ ವಿನ್‌ಸೆಂಟ್ ಟೋನಿ, ಆಫೀಸ್ ನಂ.739, ಹೊಸೂರು ಮೈನ್ ರೋಡ್, ಸಿಂಗಸಂದ್ರ, ಬೆಂಗಳೂರು-560 068 ಇವರಿಗೆ ಮಾಹಿತಿಗಾಗಿ ಕರಡು ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸಲಾಗಿದೆ.
2. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು, ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಕರಡು ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

Scanned by CamScanner

ದೂರವಾಣಿ : 080-27835122
ಫ್ಯಾಕ್ಸ್ : 080-27836569

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ", ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

ವಸತಿ ಉದ್ದೇಶಕ್ಕಾಗಿ
ಕರಡು ಅನುಮೋದನಾ ಪತ್ರ
(ವಿನ್ಯಾಸ ಅಭಿವೃದ್ಧಿಪಡಿಸಲು ಮಾತ್ರ)

ಸಂಖ್ಯೆ: ಆಯೋಪ್ರಾ:ಎಲ್ಎಓ:30,32(ಒಗ್ಗೂಡಿಸಿ):15-16 **ದಿನಾಂಕ:** 28 DEC 2016

ವಿಷಯ: ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.60/1ರಲ್ಲಿನ 03ಎಕರೆ 27ಗುಂಟೆ ಮತ್ತು 61/2ರಲ್ಲಿನ 02ಎಕರೆ 28ಗುಂಟೆ ಒಟ್ಟು 06ಎಕರೆ 15ಗುಂಟೆ ವಿಸ್ತೀರ್ಣದ ಜಮೀನಿಗೆ ಕರಡು ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:
1. ಮೆ.ಅರಟುಕುಲಮ್ ಡೆವಲಪರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಶ್ರೀ ಟೋನಿ ವಿನ್‌ಸೆಂಟ್ ಇವರ ಮನವಿ ದಿನಾಂಕ:30.08.2016.
2. ದಿನಾಂಕ:19.09.2016ರಂದು ನಡೆದ ಪ್ರಾಧಿಕಾರದ 58ನೇ ಸಭೆಯ ವಿಷಯ ಸಂಖ್ಯೆ:18ರ ನಿರ್ಣಯ.
3. ಪ್ರಾಧಿಕಾರಕ್ಕೆ ಪಾವತಿಸಿದ ಹಣ ರೂ.10,000/- ರಶೀದಿ ಸಂಖ್ಯೆ:1133343 ದಿನಾಂಕ:13.10.2016. ಮತ್ತು ರೂ.3,02,000/- ರಶೀದಿ ಸಂಖ್ಯೆ:220003, ಮತ್ತು ಕೆರೆ ಸಂರಕ್ಷಣಾ ಶುಲ್ಕ ರೂ. 3,68,000/- ರಶೀದಿ ಸಂಖ್ಯೆ:954569 ದಿನಾಂಕ:26.08.2015. ಹಾಗೂ ರೂ.2,22,000/-ರಶೀದಿ ಸಂಖ್ಯೆ:954999 ಮತ್ತು ಕೆರೆ ಸಂರಕ್ಷಣಾ ಶುಲ್ಕ ರೂ.2,70,000/- ರಶೀತಿ ಸಂಖ್ಯೆ:954563 ದಿನಾಂಕ:25.08.15.
4. ಬ್ಯಾಗಡದೇನಹಳ್ಳಿ ಗ್ರಾಮ ಪಂಚಾಯ್ತಿ ಕಾರ್ಯಾಲಯ ರವರ ಪತ್ರ ದಿನಾಂಕ:19.12.2016.
5. ಆನೇಕಲ್ ಉಪನೊಂದಣಾಧಿಕಾರಿಗಳ ಪತ್ರ ಸಂಖ್ಯೆ:ANK-1-05703-2016-17 ನೊಂದಾಯಿತ ಪರಿತ್ಯಜನಾ ಪತ್ರದ ನೊಂದಣಿ ದಿನಾಂಕ:17.12.2016.

****

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಸೊಪ್ಪಹಳ್ಳಿ ಗ್ರಾಮದ ಸ.ನಂ.60/1ರಲ್ಲಿನ 03ಎಕರೆ 27ಗುಂಟೆ ಮತ್ತು 61/2ರಲ್ಲಿನ 02ಎಕರೆ 28ಗುಂಟೆ ಒಟ್ಟು 06ಎಕರೆ 15ಗುಂಟೆ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸಲು ಕೋರಿರುತ್ತಾರೆ. ಉಲ್ಲೇಖ(2)ರಂತೆ, ನಡೆದ ಪ್ರಾಧಿಕಾರದ ಸಭೆಯಲ್ಲಿ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಗಿದೆ. ಹಾಗೂ ಉಲ್ಲೇಖ(3)ರಂತೆ, ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ(4)ರಂತೆ, ಉದ್ಯಾನವನ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಪ್ರದೇಶವನ್ನು ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ ಕಾರ್ಯಾಲಯಕ್ಕೆ ಉಲ್ಲೇಖ(5)ರಂತೆ, ಸಾರ್ವಜನಿಕ ನಿವೇಶನವನ್ನು ಪ್ರಾಧಿಕಾರಕ್ಕೆ ನೊಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ಹಸ್ತಾಂತರಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ17(2)ರನ್ವಯ ಕರಡು ವಸತಿ ವಿನ್ಯಾಸವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ತಾತ್ಕಾಲಿಕ ಅನುಮೋದನೆ

ನೀಡಲಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡಿದಲ್ಲಿ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗುವುದು.

ಕ್ರ.ಸಂ.

ಷರತ್ತುಗಳು

1. ಅನುಮೋದನೆ ನೀಡಿದ ದಿನಾಂಕದಿಂದ ಎರಡು ವರ್ಷದೊಳಗೆ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ತಾತ್ಕಾಲಿಕ ಅನುಮೋದನೆಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಈ ಪ್ರಾಧಿಕಾರದಿಂದ ನೀಡಿರುವ Demarcation ನಕ್ಷೆಯಂತೆ ಜಮೀನಿನ ಮೇಲೆ ಅಳವಡಿಸಿರುವ ಅಳತೆಗೆ ಅನುಗುಣವಾಗಿ ಕರಡು ವಿನ್ಯಾಸ ನಕ್ಷೆಯನ್ನು (ಅಭಿವೃದ್ಧಿಪಡಿಸುವುದಕ್ಕೆ ಮಾತ್ರ)ಅನುಮೋದಿಸಲಾಗಿದೆ.
3. ಅಂತಿಮ ಹಂತದ ಅಂದರೆ ಶೇಕಡ 100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಪೂರ್ವದಲ್ಲಿ ವಿನ್ಯಾಸದಲ್ಲಿ ಎಲ್ಲಾ ಸಿವಿಲ್ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ನೀರಿನ ಸಂಪರ್ಕ ಹಾಗೂ ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಲೋಕೋಪಯೋಗಿ ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆಯಿಂದ ಮತ್ತು ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
4. ವಸತಿ ವಿನ್ಯಾಸದಲ್ಲಿ ಕಾಯ್ದಿರಿಸಿರುವ ಉದ್ಯಾನವನ ಪ್ರದೇಶಕ್ಕೆ Fencing ಅಳವಡಿಸಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ತೋಟಗಾರಿಕೆ ಇಲಾಖೆಯಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
5. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯ ಒಳಚರಂಡಿ ವ್ಯವಸ್ಥೆ ಹಾಗೂ ಶುದ್ಧೀಕರಣ ಘಟಕ (STP)ವನ್ನು ವಿನ್ಯಾಸದಲ್ಲಿ ನಿರ್ಮಾಣ ಮಾಡತಕ್ಕದ್ದು.
6. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
7. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸುವುದು.
8. ಕರಡು ಅನುಮೋದಿತ ವಿನ್ಯಾಸದ ಸೂಕ್ತಸ್ಥಳಗಳಲ್ಲಿ Storm Water Pits (SEP) ಮತ್ತು (RP)ಗಳನ್ನು ನಿರ್ಮಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ (Rain water Harvesting pit)ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
9. ಕರಡು ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿದ ನಿವೇಶನವನ್ನು ಒತ್ತುವರಿಯಾಗದಂತೆ ಸಂರಕ್ಷಿಸತಕ್ಕದ್ದು.
10. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಇಲಾಖೆಗಳು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.
11. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
12. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

13. ಪ್ರಸ್ತಾವಿತ ಬಡಾವಣೆಯಲ್ಲಿ ವಿಕಲಚೇತನರಿಗೆ ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಪಾದಚಾರಿ ಮಾರ್ಗವನ್ನು ಹಾಗೂ ರಸ್ತೆಗಳನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು.

14. ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ ಮುಂತಾದವುಗಳಿಗೆ ವಿನ್ಯಾಸದ ಯಾವುದೇ ಮಲೀನ ನೀರನ್ನು ಬಿಡಬಾರದು.

15. ಈ ಅನುಮೋದಿತ ಕರಡು ವಸತಿ ವಿನ್ಯಾಸ ನಕ್ಷೆ ಪ್ರದೇಶದಲ್ಲಿ ಬರುವ 'ಬಿ' ಖರಾಬು ಜಮೀನುಗಳು ಸರ್ಕಾರಕ್ಕೆ ಸೇರಿರುತ್ತದೆ. ಈ ಜಮೀನುಗಳನ್ನು ಯಥಾಸ್ಥಿತಿಯಂತೆ ಕಾಪಾಡತಕ್ಕದ್ದು. ಹಾಗೂ ಅತಿಕ್ರಮಣ ಮಾಡಬಾರದು ಮತ್ತು ಇತರೆ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ.

16. **ಸದರಿ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ ಗೇಟ್‌ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ವಿನ್ಯಾಸದಲ್ಲಿನ ರಸ್ತೆ, ಪಾದಚಾರಿ ಮಾರ್ಗ ಹಾಗೂ ಉದ್ಯಾನವನಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಸ್ವತ್ತುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಡತಕ್ಕದ್ದು.**

17. ಕರಡು ಅನುಮೋದಿತ ವಿನ್ಯಾಸದಲ್ಲಿ ಬರುವ 18.00ಮೀಟರ್ ಗಿಂತ ಹೆಚ್ಚಿನ ಅಗಲದ ರಸ್ತೆಗಳ ಅಕ್ಕ-ಪಕ್ಕದಲ್ಲಿ ಪಾದಚಾರಿ ಮತ್ತು ಸೈಕಲ್ ಟ್ರ್ಯಾಕ್‌ನ್ನು ಅಳವಡಿಸಿಕೊಳ್ಳತಕ್ಕದ್ದು.

18. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

19. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 17(4)ರಂತೆ ಕ್ರಮ ಜರುಗಿಸಲಾ-ಗುವುದು.

20. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.

21. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ಅಂಚಿನಲ್ಲಿ ಬಡಾವಣೆಗಳ ಉದ್ದಕ್ಕೂ ಡಾಂಬರು ರಸ್ತೆಯ ಮೇಲ್ಮೈನಿಂದ 2 ½ ಅಡಿ ಆಳಕ್ಕೆ ಚರಂಡಿಯ ಮೇಲ್ಮೈ ರಸ್ತೆಯ ಮಟ್ಟದಿಂದ ¾ ಅಡಿ ಕೆಳಕ್ಕೆ ರಸ್ತೆ ಮತ್ತು ಬಡಾವಣೆಯ ನೀರು ಚರಂಡಿಗೆ ಹೋಗುವಂತೆ ಕಾಂಕ್ರೀಟ್ ಚರಂಡಿ ನಿರ್ಮಿಸುವಂತೆ ಮತ್ತು ಬಡಾವಣೆಯ ಮುಖ್ಯದ್ವಾರಗಳಲ್ಲಿ ಸಹ ನೀರು ರಸ್ತೆಗೆ ಹರಿದು ಬರದಂತೆ ಚರಂಡಿ ನಿರ್ಮಿಸಿ ಅದರ ಮೇಲೆ ಸೂಕ್ತ ವ್ಯವಸ್ಥೆ (COW CATCHERS) ಗಳನ್ನು ಅಳವಡಿಸುವಂತೆ, ಮತ್ತು ಬಡಾವಣೆಯ ದ್ವಾರದಿಂದ ರಸ್ತೆಯ ಅಂಚಿನವರೆಗೆ ರಸ್ತೆಯನ್ನು ಎತ್ತರಿಸದಂತೆ ಸೂಚಿಸಲಾಗಿದೆ.

22. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿ -ರುವುದಿಲ್ಲ.

28/12/16

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಪ್ರತಿಯನ್ನು:

1. ಮೆ.ಅರಟುಕುಲಮ್ ಡೆವಲಪರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟ್‌ನರ್ ಶ್ರೀ ಟೋನಿ ವಿನ್‌ಸೆಂಟ್, ಆಫೀಸ್ ನಂ.739, ಹೊಸೂರು ಮೈನ್ ರೋಡ್, ಸಿಂಗಸಂದ್ರ, ಬೆಂಗಳೂರು-560 068 ಇವರಿಗೆ ಮಾಹಿತಿಗಾಗಿ ಕರಡು ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸಲಾಗಿದೆ.
2. ಪಂಚಾಯ್ತಿಅಭಿವೃದ್ಧಿ ಅಧಿಕಾರಿಗಳು, ಬ್ಯಾಗಡದೇನಹಳ್ಳಿ ಗ್ರಾಮಪಂಚಾಯ್ತಿ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಕರಡು ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.